## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ

## ಕೆ ಆರ್ ನಗರ.

## ಸಿ.ಸಿ. ನಂ. 124/2026

ಪಿರ್ಯಾದಿ ಃ ಸರ್ಕಾರದ ಪರ ಕೆ ಆರ್ ನಗರ ಪೋಲೀಸ್ ಠಾಣೆ

ಃವಿರುದ್ಧ ಃ

ಆರೋಪಿ ಃ ಶಂಕರ ಬಿನ್ ಗಣೇಶ
41 ವರ್ಷ
ವಾಸಃ ವಾರ್ಡ ನಂ. 5 ಆದಿಶಕ್ತಿ ಬಡಾವಣೆ,
ಕೆ.ಆರ್. ನಗರ ಟೌನ
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀ ಚಂದನ್.ಎಸ್ ಬಿ.ಕಾಮ್.,ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿ ನಾಯಾಧೀಶರು, ಕೆ.ಆರ್.ನಗರ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಿಸುವುದೇನೆಂದರೆಃ

ಚಾಸಾ-1 ನಂದೀಶ ರವರು ಆರೋಪಿಯ ಬಳಿ 3-4 ವರ್ಷಗಳಿಂದ ಕಾಂಕ್ರೀಟ್ ಹಾಕುವ ಕೂಲಿ ಕೆಲಸವನ್ನು ಮಾಡಿಕೊಂಡಿದ್ದು ದಿಃ 03-11-2025 ರಂದು ಎಂದಿನಂತೆ ಚಾಸಾ-2, 3 ಮತ್ತು 4 ರವರೊಂದಿಗೆ ಚೀರನಹಳ್ಳಿ ಗ್ರಾಮದ ಚಾಸಾ-5 ಮೂರ್ತಿರವರ ಮನೆಗೆ ಕಾಂಕ್ರೀಟ್ ಹಾಕುವ ಕೆಲಸಕ್ಕೆಂದು ಬೆಳಿಗ್ಗೆ 7.30 ಗಂಟೆ ಸಮಯದಲ್ಲಿ ಇದೇ ಕೆ ಆರ್.ನಗರ ಟೌನಿನ ರೆಡಿಯೋ ಮೈದಾನದಿಂದ ಆರೋಪಿರವರ ಸೂಚನೆ ಮೇರೆಗೆ ಕಾಂಕ್ರಿಟ್ ಮಿಕ್ಸರ್ ಮೇಷಿನ್ ನ್ನು ಚಾಸಾ-1 ನಂದೀಶರವರು ಚಾಸಾ-5 ರವರ ಮನೆಯ ಬಳಿಗೆ ತಳ್ಳಿಕೊಂಡು ಹೋಗುತ್ತಿದ್ದ ವೇಳೆ ಆರೋಪಿಯಾದ ನೀವು ಯಾವುದೇ ಸದರಿ ಮಿಕ್ಸರ್ ಮೇಷಿನ್ ಅನ್ನು ತೆಗೆದುಕೊಂಡು ಹೋಗಲು ಯಾವುದೇ ಮುಂಜಾಗ್ರತ ಕ್ರಮ ಕೈಗೊಳ್ಳದೇ ಚಾಸಾ-1 ರವರ ಕೈ ನಲ್ಲಿ ತಳ್ಳಿಸಿಕೊಂಡು ಹೋಗುತ್ತಿದ್ದ ವೇಳೆ ಕಾಂಕ್ರಿಟ್ ಮೇಷಿನ್ ಹಳ್ಳಕ್ಕೆ ಭಾಗಿಕೊಂಡು ಚಾಸಾ-1 ರವರ ಬಲಗಾಲಿನ ಮೇಲೆ ಬಿದ್ದ ಪರಿಣಾಮ ಚಾಸಾ-1 ರವರ ಬಲಗಾಲಿನ ಪೀಮಾರ ಬೋನ್ ಗೆ ತೀವ್ರವಾದ ಪೆಟ್ಟಾಗಿ ತೀವ್ರ ಸ್ವರೂಪದ ಗಾಯಗಳಾಗಿರುತ್ತವೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ **ಕಲಂ 125(ಬಿ)** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಪ್ರಃ 1) ಕನ್ನಡದಲ್ಲಿ ಓದಿ ಹೇಳಿದ ಮೇಲಿನ ದೋಷಾರೋಪಣೆ ಅರ್ಥವಾಯಿತೇ?

ಉಃ ಅರ್ಥವಾಯಿತು

ಪ್ರಃ 2) ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?

ಉಃ ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿಃ 24-02-2026

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ ಆರ್ ನಗರ.

**ಆರೋಪಿಯ ಸಹಿಃ**